# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1694** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ )** |
| **ಉತ್ತರಿಸಬೇಕಾದ ದಿನಾಂಕ** | : | **14.03.2022** |
| **ಉತ್ತರಿಸಬೇಕಾದ ಸಚಿವರು** | : | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು** |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಕೋಲಾರ ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಲ್ಲಿ ಎಷ್ಟು ಆಸ್ಪತ್ರೆಗಳಿಗೆ ವೆಂಟಿಲೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. (ಆಸ್ಪತ್ರೆವಾರು ವಿವರ ನೀಡುವುದು)</td><td>ಕೋಲಾರ ಜಿಲ್ಲೆಯಲ್ಲಿ ಕಳೆದ 02 ವರ್ಷಗಳಲ್ಲಿ ಆಸ್ಪತ್ರೆಗಳಿಗೆ ಒದಗಿಸಿರುವ ವೆಂಟಿಲೇಟರ್‌ಗಳ ವಿವರ ಈ ಕೆಳಕಂಡಂತಿವೆ.
<table>
<tr><th>ಆಸ್ಪತ್ರೆಯ ಹೆಸರು</th><th>ವೆಂಟಿಲೇಟರ್‌ಗಳ ವಿವರ</th></tr>
<tr><td>ಎಸ್. ಎನ್. ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ</td><td>20</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಬಂಗಾರಪೇಟೆ</td><td>5</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಶ್ರೀನಿವಾಸಪುರ</td><td>5</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಕೆ. ಜಿ. ಎಫ್</td><td>5</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಮುಳಬಾಗಿಲು</td><td>5</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಮಾಲೂರು</td><td>5</td></tr>
</table></td></tr>
<tr><td>ಆ)</td><td>ಕೋಲಾರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ಯಾವ ಖಾಯಿಲೆಗಳ ಚಿಕಿತ್ಸೆಗಾಗಿ ವಿಶೇಷ ಘಟಕಗಳನ್ನು ಸ್ಥಾಪನೆ ಮಾಡಲಾಗಿದೆ. (ವಿವರ ನೀಡುವುದು)</td><td>ಎನ್. ಸಿ. ಡಿ ಕಾರ್ಯಕ್ರಮದ ಭಾಗವಾಗಿ 3 ಮುಖ್ಯ ಘಟಕಗಳು ಕೋಲಾರ ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.<br>1. ಜಿಲ್ಲಾ ಎನ್. ಸಿ. ಡಿ ಕ್ಲಿನಿಕ್: ಜಿಲ್ಲಾ ಆಸ್ಪತ್ರೆಗೆ ಯಾವುದೇ ಕಾರಣಕ್ಕೆ ಚಿಕಿತ್ಸೆಗಾಗಿ ಆಗಮಿಸುವ 30 ವರ್ಷ ಮೇಲ್ಪಟ್ಟ ಎಲ್ಲರಿಗೂ ರಕ್ತದೊತ್ತಡ, ಮಧುಮೇಹ ಮತ್ತು 3 ಮುಖ್ಯ ಕ್ಯಾನ್ಸರ್ (ಸ್ತನ ಕ್ಯಾನ್ಸರ್, ಗರ್ಭಕಂಠದ ಕ್ಯಾನ್ಸರ್ ಮತ್ತು ಬಾಯಿ ಕ್ಯಾನ್ಸರ್)ಗಳಿಗೆ ಪೂರ್ವಭಾವಿ ತಪಾಸಣೆ ಕೈಗೊಳ್ಳಲಾಗುವುದು. ರೋಗ ಖಾತ್ರಿಯಾದವರಿಗೆ ಅಗತ್ಯ ಚಿಕಿತ್ಸೆ ನೀಡಿ, ಮುಂದುವರೆಸುವ ಬಗ್ಗೆ ಅನುಪಾಲನೆ ಮಾಡಲಾಗುವುದು. (ಪ್ರತ್ಯೇಕ ಮಾನವ ಸಂಪನ್ಮೂಲವನ್ನು ಆರೋಗ್ಯ ಅಭಿಯಾನದಿಂದ ಒದಗಿಸಲಾಗಿದೆ).<br>2. ಹಿರಿಯರ ಆರೈಕೆ ಘಟಕ: 60 ವರ್ಷಕ್ಕೂ ಮೇಲ್ಪಟ್ಟ ಹಿರಿಯರಿಗೆ ಏಕಗವಾಕ್ಷಿ ಮಾದರಿಯಲ್ಲಿ ಚಿಕಿತ್ಸೆ ನೀಡಲು ಹಿರಿಯರ ಆರೋಗ್ಯ ಘಟಕವನ್ನು ಜಿಲ್ಲಾ ಆಸ್ಪತ್ರೆ ಮಟ್ಟದಲ್ಲಿ ಸ್ಥಾಪಿಸಲಾಗಿದೆ. ಹಿರಿಯರಿಗೆ ಹೊರರೋಗಿ ಸೇವೆ, ಒಳರೋಗಿ ಸೇವೆಗಳು, ಪ್ರಯೋಗಶಾಲಾ ಪರೀಕ್ಷೆ ಮತ್ತು ಭೌತಿಕ ಚಿಕಿತ್ಸೆಗೆ ಇಲ್ಲಿ ವ್ಯವಸ್ಥೆ ಇರುತ್ತದೆ.<br>(ಪ್ರತ್ಯೇಕ ಮಾನವ ಸಂಪನ್ಮೂಲವನ್ನು ಆರೋಗ್ಯ ಅಭಿಯಾನದಿಂದ ಒದಗಿಸಲಾಗಿದೆ).</td></tr>
</table>

<table>
<tr>
<td></td>
<td></td>
<td>3. ಜಿಲ್ಲಾ ಮಟ್ಟದ ಉಪಶಾಮಕ ಚಿಕಿತ್ಸಾ ಘಟಕ: ಕ್ಯಾನ್ಸರ್, ಪಾರ್ಶ್ವವಾಯು, ಮೂತ್ರಪಿಂಡದ ವೈಫಲ್ಯ, ಹೃದಯರೋಗ ಮತ್ತು ವಯೋಸಹಜ ದುರ್ಬಲತೆಯಿಂದ ನಿತ್ರಾಣ ಸ್ಥಿತಿಯಲ್ಲಿರುವ ಮತ್ತು ವಾಸಿಯಾಗಲಾರದ ಸ್ಥಿತಿಯಲ್ಲಿರುವ, ಹಾಸಿಗೆ ಹಿಡಿದಿರುವ ರೋಗಿಗಳಿಗೆ ಉಪಶಾಮಕ ಆರೈಕೆ ನೀಡುವ ಸಲುವಾಗಿ ಮೂಲಸೌಕರ್ಯ ಕಲ್ಪಿಸಲಾಗುತ್ತಿದೆ.<br><br>
1. ನವಜಾತ ಶಿಶುಗಳ ಆರೈಕೆಗಾಗಿ ಎಸ್. ಎನ್. ಸಿ. ಯ ವಿಭಾಗ,<br>
2. ಡಯಾಲಿಸಿಸ್ ರೋಗಿಗಳ ಚಿಕಿತ್ಸೆಗಾಗಿ ಡಯಾಲಿಸಿಸ್ ವಿಭಾಗ,<br>
3. ಮೂತ್ರಕೋಶಕ್ಕೆ ಸಂಬಂಧಿಸಿದ ರೋಗಗಳಿಗೆ ಯುರಾಲಜಿ ವಿಭಾಗ,<br>
4. ಎನ್.ಆರ್.ಸಿ ವಿಭಾಗ,<br>
5. ಹೆಚ್. ಐ. ವಿ ಸೋಂಕಿತ ರೋಗಗಳ ಚಿಕಿತ್ಸೆ ಎ.ಆರ್ .ಟಿ ವಿಭಾಗ,<br>
6. ಕ್ಷಯರೋಗ ನಿಯಂತ್ರಣ ಘಟಕ,<br>
7. ಪಂಚಕರ್ಮ ವಿಭಾಗ,<br>
8. ಯುನಾನಿ ವಿಭಾಗ,<br>
9. ಡಿ.ಇ.ಐ.ಸಿ ಚಿಕಿತ್ಸಾ ವಿಭಾಗ,<br>
10. ಮಾನಸಿಕ ರೋಗಿಗಳಿಗೆ ಕೌನ್ಸಲಿಂಗ್ ಮತ್ತು ಚಿಕಿತ್ಸೆ ನೀಡಲಾಗಿದೆ.<br>
11. ಜಾಯಿಂಟ್ ಕ್ಲಿನಿಕ್,</td>
</tr>
<tr>
<td>ಇ)</td>
<td>ಕೋಲಾರ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳು ಎಷ್ಟು; ಈ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ಕೋಲಾರ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳು ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿವೆ.<br><br>
<table>
<tr><td>ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>69</td></tr>
<tr><td>ಸಮುದಾಯ ಆರೋಗ್ಯ ಕೇಂದ್ರಗಳು</td><td>02</td></tr>
<tr><td>ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು</td><td>04</td></tr>
<tr><td>ಜಿಲ್ಲಾ ಆಸ್ಪತ್ರೆ</td><td>01</td></tr>
<tr><td>ಆರೋಗ್ಯ ವಿಸ್ತರಣಾ ಘಟಕಗಳು</td><td>05</td></tr>
</table>
<br>
ಕೋಲಾರ ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಮಂಜೂರಾಗಿರುವ ಹುದ್ದೆಗಳು ಮತ್ತು ಪ್ರಸ್ತುತ ಖಾಲಿಯಿರುವ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
</table>

**ಸಂಖ್ಯೆ: ಆಕುಕ 24 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕೋಲಾರ ಇವರ ಅಧೀನದಲ್ಲಿ ಬರುವ ವಿವಿಧ ವೃಂದಗಳ ಮಂಜೂರಾತಿ, ಕಾರ್ಯನಿರತ ಹಾಗೂ ಖಾಲಿ ಹುದ್ದೆಗಳ ಮಾಹಿತಿ. ದಿನಾಂಕ: 09.03.2022**

| ಕ್ರ.ಸಂ | ಪದನಾಮ | ಮಂಜೂರಾತಿ | ಕಾರ್ಯನಿರತ | ಖಾಲಿ | ಷರಾ |
|---|---|---|---|---|---|
| 1 | ವೈದ್ಯಾಧಿಕಾರಿಗಳು | 181 | 153 | 28 | |
| 2 | ಗ್ರೂಪ್ 'ಬಿ' ಅಧಿಕಾರಿಗಳು | 9 | 8 | 1 | |
| 3 | ಕಛೇರಿ ಅಧೀಕ್ಷಕರು | 7 | 7 | 0 | |
| 4 | ಪ್ರಥಮ ದರ್ಜೆ ಸಹಾಯಕರು | 62 | 42 | 20 | |
| 5 | ದ್ವಿತೀಯ ದರ್ಜೆ ಸಹಾಯಕರು | 30 | 15 | 15 | |
| 6 | ಉಪ ಜಿಲ್ಲಾ ಶಿಕ್ಷಣಾಧಿಕಾರಿಗಳು | 2 | 0 | 2 | |
| 7 | ನೇತ್ರಾಧಿಕಾರಿ | 14 | 8 | 6 | |
| 8 | ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು | 21 | 7 | 14 | |
| 9 | ಶೀಘ್ರಲಿಪಿಗಾರರು | 1 | 0 | 1 | |
| 10 | ಹಿರಿಯ ಟೈಪಿಸ್ಟ್ | 1 | 0 | 1 | |
| 11 | ಕಿರಿಯ ಟೈಪಿಸ್ಟ್ | 2 | 1 | 1 | |
| 12 | ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು | 56 | 43 | 13 | |
| 13 | ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು | 8 | 5 | 3 | |
| 14 | ಹಿರಿಯ ಫಾರ್ಮಸಿ ಅಧಿಕಾರಿ | 6 | 3 | 3 | |
| 15 | ಫಾರ್ಮಸಿ ಅಧಿಕಾರಿ | 74 | 54 | 20 | |
| 16 | ಕ್ಷ-ಕಿರಣ ತಂತ್ರಜ್ಞರು | 10 | 8 | 2 | |
| 17 | ಫಿಜಿಯೋಥೆರಪಿಸ್ಟ್ | 1 | 0 | 1 | |
| 18 | ರೆಫ್ರಿಜರೇಟರ್ ಮೆಕಾನಿಕ್ | 1 | 0 | 1 | |
| 19 | ಕ್ಲರ್ಕ ಕಂ ಟೈಪಿಸ್ಟ್ | 10 | 0 | 10 | |
| 20 | ಚಲನಚಿತ್ರ ಪ್ರದರ್ಶಕರು | 1 | 0 | 1 | |
| 21 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 2 | 0 | 2 | |
| 22 | ಸ್ಕಿಲ್ಡ್ ಅಸಿಸ್ಟೆಂಟ್ | 2 | 0 | 2 | |
| 23 | ಸ್ಕಿಲ್ಡ್ ಟ್ರೇಡ್‌ಮನ್ | 1 | 0 | 1 | |
| 24 | ಮಾಸ್ಟರ್ ಆರ್ಟಿಸರ್ಜನ್ | 1 | 0 | 1 | |
| 25 | ವಾಹನ ಚಾಲಕರು | 48 | 27 | 21 | |
| 26 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 284 | 124 | 160 | |
| 27 | ಆರೋಗ್ಯ ನಿರೀಕ್ಷಣಾಧಿಕಾರಿ | 134 | 57 | 77 | |
| 28 | ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 52 | 20 | 32 | |
| 29 | ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ | 43 | 11 | 32 | |
| 30 | ಶುಶ್ರೂಷಣಾಧಿಕಾರಿ | 124 | 96 | 28 | |
| 31 | ಹಿರಿಯ ಶುಶ್ರೂಷಣಾಧಿಕಾರಿ | 2 | 0 | 2 | |
| 32 | ಆರೋಗ್ಯ ಮೇಲ್ವಿಚಾರಕರು | 2 | 0 | 2 | |
| 33 | ಗ್ರೂಪ್-ಡಿ | 318 | 109 | 209 | |
| | ಒಟ್ಟು | 1510 | 798 | 712 | |

ಕೋಲಾರ ಜಿಲ್ಲೆಯಲ್ಲಿರುವ ಆಸ್ಪತ್ರೆಗಳ ವಿವರ

| ಕ್ರ.ಸಂ | ಆಸ್ಪತ್ರೆಯ ಹೆಸರು | ಸಂಖ್ಯೆ | ಷರಾ |
|---|---|---|---|
| 1 | ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ | 1 | |
| 2 | ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳು | 5 | |
| 3 | ಸಮುದಾಯ ಆರೋಗ್ಯ ಕೇಂದ್ರಗಳು | 2 | |
| 4 | ಪ್ರಾಥಮಿಕ ಆರೋಗ್ಯ ಕೇಂದ್ರಗಳು | 66 | |